ನಕ್ಷತ್ರ ಪಟ



ಟಿ.ಎಸ್. ನಾಗರಾಜ ಶೆಟ್ಟಿ

ಕಲೆ: ಸಂತೋಷ್ ಸಸಿಹಿತ್ಲು

# ತಪ್ಪೇನು?

ವೀಕೆಂಡ್ ಅಂತ ಪಾರ್ಕಿಗೆ ಕರೆದರು
ಅಪ್ಪ ಪೂರ್ವೀನ
ಹತ್ತಿ ಜಾರಿ ಮೇಲೆ ಕೆಳಗೆ
ಸವೆಸಿದಳವಳು ಸ್ಲಯಿಡನ್ನ !

ಆಡಿದ್ದಾಯ್ತು ಓಡಿದ್ದಾಯ್ತು
ತಿನ್ನಬೇಕಲ್ಲ ಕೊನೇಲಿ?
ಬೆಂಚಿನ ಅಂಚಲಿ ಕೂರಿಸಿ ಅವಳನು
ಹೇಳಿದನಪ್ಪ ಕಿವೀಲಿ

ಇಲ್ಲೇ ಇರು ಪಾಪು ತಿಂಡೀ ತರ್ತೀನಿ
ಎಲ್ಲಿಗು ಎದ್ದು ಬರಬೇಡ
ಎದ್ದರೆ ನೀನು ಒಳ್ಳೆಯದಲ್ಲ
ಕಳ್ಳರು ಒಯ್ವರು ಮರೀಬೇಡ

ಆರ್ಡರ್ ಮಾಡಿದ ಅಪ್ಪನು ಗಾಡಿಯ
ಬಳಿಯಲಿ ನಿಂತನು ಕಾಯುತ್ತ
ಕೊಟ್ಟೇಸಾರ್ ಅನ್ನುತ್ತಿರಲು ಗಾಡಿವಾಲ
ತೇಲಿತು ಪೂರಿ ಬಾಂಡಲಿಯಲ್ಲಿ ಬೇಯುತ್ತ

ಯಾರೋ ಕಾಲನು ತಡಕಿದರೆಂದು
ಅಪ್ಪನು ಬಾಗಿ ನೋಡಿದನು
ಪ್ಯಾಂಟನು ತಡವಿದ ಪೂರ್ವಿಯ ಕಂಡು
ಮತ್ತೆ ಅವಳನು ಗದರಿದನು

ಒಂದೇ ಮಾತು ಪೂರ್ವಿಯ ಬಾಯಲಿ
'ನಾ ಬಂದದ್ದೇಕೆ ಗೊತ್ತೇನು?
ಕಳ್ಳರು ಬಂದು ಒಯ್ವರು ನಿನ್ನನು
ಅದಕೇ ಬಂದೆನು ತಪ್ಪೇನು?'

